ಪ್ರಧಾನಿ ಅಡಿಗಲ್ಲು ಹಾಕಿರತಕ್ಕ ಒಂದು ಯೋಜನೆಯ ಬಗ್ಗೆ ನಾವು ತೀವ್ರವಾಗಿ ಗಮನಹರಿಸಬೇಕು. ಈ ಕೆಲಸ ಹಿಂದೆಯೇ ಆಗಬೇಕಾಗಿತ್ತು. ಆಗ ಈಗಿನ ನಮ್ಮ ಮುಖ್ಯಮಂತ್ರಿಗಳು ಕೇಂದ್ರದಲ್ಲಿ ಮಂತ್ರಿಗಳಾಗಿದ್ದರು. ಆ ಕಾಲಕ್ಕೆ ಅದು ಆಗಬೇಕಾಗಿತ್ತು. ಈಗಲಾದರೂ ಸಹ ಆ ರಾಜಕೀಯ ವಿಚಾರಗಳನ್ನು ಬಿಟ್ಟು ಈ ಯೋಜನೆಗೆ ಪಂಜೂರಾತಿಯನ್ನು ಪಡೆಯುವುದರ ಸಲುವಾಗಿ ನಮ್ಮವರೇ ಆದ ಯೋಜನಾ ಆಯೋಗದ ಉಪಾಧ್ಯಕ್ಷರು ಸಂಪೂರ್ಣ ಬೆಂಬಲವನ್ನು ಕೊಟ್ಟು ಈ ರೀತಿ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಯೇ ತೀರಬೇಕೆಂಬ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಇದರಲ್ಲಿ ರಾಜಕೀಯ ಇಲ್ಲ. ಆದರಲ್ಲೂ ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ರಾಜಕೀಯ ಮಾಡುವುದಕ್ಕೆ ತಯಾರಿಲ್ಲ. ಇದರಲ್ಲಿ ಯಾವುದೇ ರೀತಿಯ ರಾಜಕೀಯ ಇಲ್ಲ.

ಅಧ್ಯಕ್ಷರು.—ಶ್ರೀ ಶಂಬುನಾಥ್.—ನೀವು ಪ್ರಶ್ನೆಯನ್ನು ಕೇಳಿ

ಶ್ರೀ ಇ. ಟಿ. ಶಂಭುನಾಥ್.—ನಾನು ಯಾವ ಪ್ರಶ್ನೆಯನ್ನು ಕೇಳಲಿ.....

(ನಗು)

ಅಧ್ಯಕ್ಷರು.—ನೀವು ಬಳ್ಳಾರಿ ಜಿಲ್ಲೆಯವರಲ್ಲವೇ; ಅದಕ್ಕಾಗಿ ಈ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳಿ ಅಂತ ಹೇಳಿದೆ.

ಶ್ರೀ ಇ. ಟಿ. ಶಂಭುನಾಥ್.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಬಳ್ಳಾರಿ ಸ್ಪೀಲ್ ಪ್ಲಾಂಟಾದರೂ ಅದುಕೂಡ ಇಡೀ ಕರ್ನಾಟಕಕ್ಕೆ ಸಂಬಂಧಪಟ್ಟದ್ದಾಗಿದೆ. ಅವರು ಕೇಳುತ್ತಿದ್ದರು. ಅದಕ್ಕಾಗಿ ನಾನು ಸುಮ್ಮನಾಗಿ ಬಿಟ್ಟೆ.

ಹರಿಜನರ ಮೇಲೆ ನಡೆದ ಹಲ್ಲೆ ಹಾಗೂ ದೌರ್ಜನ್ಯಗಳ ಬಗ್ಗೆ.

೮೮೮. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿ ಕಳೆದ ಆರು ತಿಂಗಳಿಂದ ಹರಿಜನರ ಮೇಲೆ ನಡೆದ ಹಲ್ಲೆ

ಆ) ಹಲ್ಲೆ ನಡೆಸಿದವರ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು ? ಹಾಗೂ ತಪ್ಪಿತಸ್ಥರಲ್ಲಿ ಎಷ್ಟು ಮಂದಿಗೆ ಶಿಕ್ಷೆಯಾಗಿರುತ್ತದೆ ?

ಇ) ನೊಂದ ಕುಟುಂಬಗಳಿಗೆ ಸರ್ಕಾರ ಯಾವ ರೀತಿ ನೆರವು ಹಾಗೂ ಸಹಾಯ ನೀಡಿದೆ ?

ಈ) ಹರಿಜನರ ಮೇಲಿನ ಹಲ್ಲೆ ದೌರ್ಜನ್ಯವನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಉ) ಕೇಂದ್ರ ಸರ್ಕಾರದಿಂದ ಪರಿಹಾರ ಹಣ ಬಂದಿದೆಯೇ ? ಹಾಗಿದ್ದಲ್ಲಿ ಎಷ್ಟು ಹಣ ಬಂದಿರುತ್ತದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳ ಪರವಾಗಿ).—

ಅ) ೩೮೫.

ಆ) ಹಲ್ಲೆ ನಡೆಸಿದವರ ಮೇಲೆ ಮೊಕದ್ದಮೆ ನೋಂದಾಯಿಸಿ ಹಾಗೂ ಅವರನ್ನು ಬಂದಿಸಿ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗುತ್ತಿದೆ. ತಪ್ಪಿತಸ್ಥರ ಮೇಲೆ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು ವಿಚಾರಣಾ ಹಂತದಲ್ಲಿರುತ್ತವೆ.

ಇ) ನೊಂದ ಕುಟುಂಬಗಳಿಗೆ, ಆದೇಶ ಸಂಖ್ಯೆ/ಎಸ್‌ಡಬ್ಲ್ಯೂಎಲ್ ೧ ಎಸ್‌ಎಸ್‌ಸಿ ೮೬ ದಿನಾಂಕ ೨೧-೪ ೮೬ರ ಪ್ರಕಾರ ಪರಿಹಾರ ನೀಡಲಾಗಿದೆ. ಜಿಲ್ಲಾ ಪರಿಷತ್ ವತಿಯಿಂದ ದೌರ್ಜನ್ಯದಲ್ಲಿ ನೊಂದ ಕುಟುಂಬಗಳಿಗೆ ಪುನರ್‌ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇಂತಹ ಸಹಾಯ ಧನ ಯೋಜನೆಯಡಿಯಲ್ಲಿ ಬ್ಯಾಂಕ್‌ಗಳಿಂದ ಸಾಲಗಳನ್ನು ಕೊಡಿಸಲಾಗುತ್ತಿದೆ.

ಈ) ೧. ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ರಕ್ಷಣೆಗೆ ಜವಾಬ್ದಾರರನ್ನಾಗಿ ಮಾಡಿದೆ.

೨. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರಿಗೆ ರಕ್ಷಣೆ ಕೊಡುವಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಸಾಮರ್ಥ್ಯದ ಬಗ್ಗೆ ಅವರ ವಾರ್ಷಿಕ ರಹಸ್ಯ ವರದಿಗಳಲ್ಲಿ ನಮೂದು ಮಾಡಲಾಗುವುದು.

೩. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನರ ರಕ್ಷಣೆ ಮತ್ತು ದೌರ್ಜನ್ಯವೆಸಗಿದವರ ಮೇಲೆ ದಂಡ ವಿಧಿಸುವ ಬಗ್ಗೆ ಜನರಿಗೆ ವಿಸ್ತೃತ ತಿಳುವಳಿಕೆ ನೀಡಲಾಗಿದೆ.

೪. ನಾಗರೀಕ ಹಕ್ಕು ಜಾರಿ ಘಟಕ ಅಧಿಕಾರಿಗಳು ಗ್ರಾಮಗಳಿಗೆ ಕಾಲಕಾಲಕ್ಕೆ ಭೇಟಿ ನೀಡುತ್ತಾರೆ

೫. ದೌರ್ಜನ್ಯವೆಸಗಿದವರ ಮೇಲೆ ಕಾನೂನುರೀತ್ಯಾ ತೀವ್ರವಾದ ಕ್ರಮ ಕೈಗೊಳ್ಳಲಾಗುತ್ತಿದೆ.

೬. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿವಾರಣಾ) ಕಾಯ್ದೆ, ೧೯೮೯ರನ್ವಯ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯಂಗಳನ್ನು ದೌರ್ಜನ್ಯ ಪ್ರಕರಣಗಳ ವಿಚಾರಣೆ ನಡೆಸುವ ಸಲುವಾಗಿ ನಿರ್ದಿಷ್ಟ ಪಡಿಸಲಾಗಿದೆ,

ಉ) ಇಲ್ಲ, ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಲಾಗುತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ಹರಿಜನರ ಮೇಲೆ ದೌರ್ಜನ್ಯ ನಡೆಯುವುದು ಏನಿದೆ ಇದೊಂದು ಸಮಾಜದ ಪಿಡುಗು ಇದರ ಬಗ್ಗೆ ಪ್ರಶ್ನೆಯನ್ನು ಕೇಳುವುದು, ಸರ್ಕಾರ ಮಾಮೂಲಾದ ಉತ್ತರವನ್ನು ಕೊಡುವುದು ಹೀಗೆ ಪ್ರತಿನಿತ್ಯ ಶಾಸನ ಸಭೆ ನಡೆಯುವ ಸಮಯದಲ್ಲಿಲ್ಲಾ ಇದು ನಡೆಯುತ್ತದೆ. ಹೀಗೆ ವರ್ಷವಿಡೀ ರಾಜ್ಯಾದ್ಯಂತ ಹರಿಜನರ ಮೇಲೆ ಹಲ್ಲೆ ನಡೆಯುತ್ತಾ ಇರುವುದು ಬಹಳ ಬೇದದ ಸಂಗತಿ. ಐದಾರು ತಿಂಗಳುಗಳ ಹಿಂದೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೩೮೫ ಪ್ರಕರಣಗಳು ನಡೆದಿವೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ನಾನು ತಮ್ಮ ಮೂಲಕ ಸರ್ಕಾರದಲ್ಲಿ ಒಂದು ಮನವಿ ಮಾಡುತ್ತೇನೆ. ಇದನ್ನು ತಾವು ದಯವಿಟ್ಟು ಪರಿಶೀಲನೆ ಮಾಡಬೇಕು. ರಾಜ್ಯ ಮಟ್ಟದಲ್ಲಿ ಎಲ್ಲ ಪಕ್ಷಗಳ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನಾದರೂ ನೇಮಕ ಮಾಡಿ, ಮೂಲತಃ ರಾಜ್ಯದಲ್ಲಿ ಇವರ ಮೇಲೆ ನಡೆಯತಕ್ಕ ಈ ದೌರ್ಜನ್ಯಗಳಿಗೆ ಕಾರಣಗಳನ್ನು ಹುಡುಕತಕ್ಕಂಥ ಪ್ರಕರಣಗಳನ್ನು ಕಂಡುಹಿಡಿಯತಕ್ಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಯೆ ? ಈಗ ಬುದಿರತಕ್ಕ ವರದಿಯ ಪ್ರಕಾರ, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹರಿಜನರಮೇಲೆ ನಡೆದಿರತಕ್ಕ ದೌರ್ಜನ್ಯಗಳ ಸಂಖ್ಯೆಸ್ವಲ್ಪಮಟ್ಟಿಗೆ ದಿಗಿಲು ಹುಟ್ಟಿಸತಕ್ಕದ್ದು ಆಗಿದೆ. ಸಂಗನಕಲ್ಲಿನ ದಲಿತಕೇರಿಯಲ್ಲಿ ನೀರು ಕೇಳಿದರು ಎನ್ನುವ ಕಾರಣಕ್ಕಾಗಿ ದೌರ್ಜನ್ಯ ನಡೆಯುತ್ತಿದೆ. ಹುಲ್ಲುಗುಡಿಸಲುಗಳಾಗಿದ್ದರೆ ಅದು ಬೇರೆ, ಭದ್ರವಾಗಿ ಕಟ್ಟಿರತಕ್ಕ ಮನೆಗಳನ್ನು ಹೊಡೆದುಹಾಕಿದ್ದಾರೆ. ಅಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇಷ್ಟೆಲ್ಲ ದೊಡ್ಡ ಪ್ರಮಾಣದಲ್ಲಿ ಘಟನೆಗಳು ನಡೆಯುತ್ತಿರುವಾಗ ಏನು ಮಾಡುತ್ತಿದ್ದರೆಂದು ನನಗೆ ತಿಳಿಯುತ್ತಿಲ್ಲ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರ ಜನ್ಮ ಶತಾಬ್ದಿ ಅಂಗವಾಗಿ ಮೆರವಣಿಗೆ ಮಾಡಿದ್ದಕ್ಕೆ ದಲಿತರ ಮೇಲೆ ಘರ್ಷಣೆ ನಡೆಯುತ್ತದೆ. ಇಂತಹ ಘರ್ಷಣೆಗಳನ್ನು ತಡೆಗಟ್ಟುವುದಕ್ಕೆ ಶಾಶ್ವತವಾದ ಒಂದು ರಾಜ್ಯಮಟ್ಟದ ಸಮಿತಿಯನ್ನು ಮಾಡುವುದಕ್ಕೆ ಅಥವಾ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಜನರ ಮೇಲೆ ಆದಂತಹ ದೌರ್ಜನ್ಯಗಳ ಬಗ್ಗೆ ಸರ್ಕಾರ ಅಂಕಿ ಅಂಶಗಳನ್ನು ಒದಗಿಸಿದೆ. ರಾಷ್ಟ್ರಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಈ ದೌರ್ಜನ್ಯಗಳನ್ನು ನಿವಾರಿಸುವುದಕ್ಕಾಗಿ ಅನೇಕ ಶಾಸನಗಳ ಮೂಲಕ, ಆಡಳಿತಾತ್ಮಕ ಧೋರಣೆಗಳ ಮೂಲಕ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಧ್ಯಕ್ಷರೇ, ತಮಗೆ ಗೊತ್ತಿರುವಹಾಗೆ, ಇತ್ತೀಚೆಗೆ ದಿನಾಂಕ ೩೦-೧-೯೦ ರಿಂದ ಅನ್ವಯವಾಗುವ ರೀತಿಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ದೌರ್ಜನ್ಯ ನಿವಾರಣಾ ಕಾಯಿದೆ ೧೯೮೯ ಅದು ಇವತ್ತು ಜಾರಿಯಲ್ಲಿದೆ. ಅದರ ಅನ್ವಯವಾಗಿ ಈಗಾಗಲೇ ನಮ್ಮ ರಾಜ್ಯ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಈ ದೌರ್ಜನ್ಯಗಳ ಪ್ರಕರಣಗಳನ್ನು ನಿರ್ದಿಷ್ಟವಾದಂಥ ಸೆಷನ್ಸ್ ಜಿಲ್ಲಾ ನ್ಯಾಯಾಲಯಗಳು ವಿಚಾರಣೆ ಮಾಡಬೇಕು ಮತ್ತು ನಿರ್ದಿಷ್ಟವಾದ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಇದನ್ನು ವಿಚಾರಣೆ ಮಾಡಬೇಕೆಂದು ಈ ಶಾಸನದನ್ವಯ ರಾಜ್ಯಸರ್ಕಾರದಪರು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇದನ್ನು ಇನ್ನು ಪೆಚ್ಚು ಯಶಸ್ವಿ ಮಾಡಬೇಕೆಂದು ತಮಗೆ ಗೊತ್ತಿರುವಹಾಗೆ ವಿಭಾಗ ಮಟ್ಟದಲ್ಲಿ ಒಂದೊಂದರಂತೆ ಒಟ್ಟು ನಾಲ್ಕು ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡ

ಬೇಕೆಂದು ಸರ್ಕಾರ ಒಂದು ಪ್ರಸ್ತಾವನೆಯನ್ನು ಪರಿಶೀಲನೆ ಮಾಡುತ್ತಿದೆ. ಆದರ ಜೊತೆಗೆ ಈಗಾಗಲೇ ದೊಡ್ಡ ದೊಡ್ಡ ಪ್ರಕರಣಗಳು ದೌರ್ಜನ್ಯಗಳು ಏನು ನಡೆಯುತ್ತಿವೆ ಅವುಗಳನ್ನು ತನಿಖೆ ಮಾಡಲು ಮತ್ತು ಕಾನೂನಿನ ಕ್ರಮಗಳನ್ನು ತ್ವರಿತಗೊಳಿಸಕ್ಕಂಥ ಕೆಲಸದ ಉಸ್ತುವಾರಿಗಾಗಿ ಸರ್ಕಾರದ ಒಳಾಡಳಿತ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಒಂದು ರಾಜ್ಯಮಟ್ಟದ ಉಚ್ಚಮಟ್ಟದ ಸಮಿತಿಯನ್ನು ಕೂಡ ರಚನೆ ಮಾಡಿದೆ, ಆ ಸಮಿತಿಯಲ್ಲಿ ಕಾನೂನು ಇಲಾಖೆಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ, ಪೋಲೀಸ್ ಇಲಾಖೆಯ ಮಹಾ ನಿರ್ದೇಶಕರು ಸದಸ್ಯರಾಗಿರುತ್ತಾರೆ. ಈ ಸಮಿತಿಯು ಇದರ ಉಸ್ತುವಾರಿಯನ್ನು ತೆಗೆದುಕೊಂಡಿದೆ. ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಪ್ರಿವೆನ್‌ಷನ ಆಫ್ ಆಟ್ರಾಸಿಟಿ ಆಕ್ಟ್ ೧೯೮೯ ಅದರ ಪ್ರಕಾರವಾಗಿ ಸರ್ಕಾರ ಬಿಗಿಯಾದ ಆಡಳಿತಕ್ಕೆ ಸಂಬಂಧಪಟ್ಟಹಾಗೆ, ಶಾಸನಕ್ಕೆ ಸಂಬಂಧಪಟ್ಟಹಾಗೆ ಕೆಲವು ನಿಯಮಗಳನ್ನು ಒಳಪಡಿಸಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಈ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಿದೆ. ಅದರ ಪ್ರಕಾರ ರಾಜ್ಯಸರ್ಕಾರ ಕೆಲವು ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕಾಗಿದೆ. ತನಿಖೆ ಮತ್ತು ವಿಚಾರಣೆ ಈ ಎರಡೂ ಭಾಗಗಳಲ್ಲಿ ಅದನ್ನು ಬಿಗಿಗೊಳಿಸಲಿಕ್ಕೆ ಬೇಕಾದಂಥ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಸನ್ಮಾನ್ಯ ವಿರೋಧಪಕ್ಷದ ನಾಯಕರು ಏನು ಸೂಚನೆಯನ್ನು ಕೊಟ್ಟಿದ್ದಾರೆ, ಆಡಳಿತಾತ್ಮಕವಾಗಿ ಮತ್ತು ಶಾಸನಾತ್ಮಕವಾಗಿ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಅಥವಾ ತಾಲ್ಲೂಕುಮಟ್ಟಗಳಲ್ಲಿ ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಅದಕ್ಕೆ ಸಮಿತಿಗಳು ಉಂಟು. ತನಿಖೆ ಮತ್ತು ವಿಚಾರಣೆ ಮಾಡಲಿಕ್ಕೆ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಈಗಿರತಕ್ಕ ಕಾನೂನಿಗೆ ಸಾಕಷ್ಟು ಅಧಿಕಾರ ಮತ್ತು ಬಲ ಇರುವುದರಿಂದ ನನಗನ್ನಿಸುತ್ತದೆ, ಇದನ್ನೆಲ್ಲ ಕ್ರೋಢೀಕರಣಗೊಳಿಸಿ ಸರಿಯಾಗಿ ಅನುಷ್ಠಾನ ಮಾಡಿದರೆ ಬಹುಶ: ಇದನ್ನೆಲ್ಲ ಸ್ವಲ್ಪ ಕಡಿಮೆ ಮಾಡಲಿಕ್ಕೆ, ನಿವಾರಣೆ ಮಾಡಲಿಕ್ಕೆ ಸಾಧ್ಯ ಇದೆ ಮತ್ತು ಸರ್ಕಾರ ಈ ಬಗ್ಗೆ ಎಲ್ಲ ಕಾರ್ಯಕ್ರಮಗಳನ್ನು ಬಿಗಿಯಾಗಿ ಕೈಗೊಳ್ಳುವುದಕ್ಕೆ ಕಟ್ಟಿಬದ್ಧವಾಗಿ ಮಾಡುತ್ತದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯಮಟ್ಟದಲ್ಲಿ ವಿರೋಧ ಪಕ್ಷದವರು ಮತ್ತು ಸರ್ಕಾರದ ಮಟ್ಟಿಗೆ ಒಂದು ಸಮಿತಿ ರಚನೆ ಮಾಡಬೇಕೆಂದು ಸೂಚನೆ ಮಾಡಿದ್ದಾರೆ. ಏಕೆಂದರೆ, ಈಗ ಕೆಲವು ಮಾರ್ಗಸೂಚಿಗಳನ್ನು ಕೇಂದ್ರಸರ್ಕಾರ ಕೊಟ್ಟಿದೆ. ಕಾನೂನು ಕೂಡ ಇದನ್ನು ಸೂಚನೆ ಮಾಡಿದೆ. ಅದಕ್ಕೆ ಹೊರತಾಗಿ ಏನಾದರೂ ಒಂದು ಅಧಿಕಾರೇತರ ಸಮಿತಿಯನ್ನು ಮಾಡತಕ್ಕಂಥ ಒಂದು ಪ್ರಶ್ನೆ ಏನಿದೆ, ಈ ಕಾಯಿದೆಗಳಿಗೆ ಅಥವಾ ಆಡಳಿತಾತ್ಮಕವಾಗಿ ಏನು ಸೂಚನೆಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಅಥವಾ ರಾಜ್ಯಸರ್ಕಾರ ಅನುಷ್ಠಾನ ಮಾಡಿದೆ, ಅದಕ್ಕೆ ಹೊರತಾಗಿದೆ. ಆದ್ದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದನ್ನು ನಾವು ಆಲೋಚನೆ ಮಾಡುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಸೂಚನೆ ಕೊಟ್ಟಿದ್ದಕ್ಕೆ ಕಾರಣ, ನಿಮ್ಮ ಸಮಿತಿ ಏನಿದೆ ಅದು ಆಡಳಿತಾತ್ಮಕವಾದ ಅಡ್ಮಿನಿಸ್ಟ್ರೇಟಿವ್ ಸೆಟ್‌ಅಪ್. ಇದು ಸಮಾಜದ ಪ್ರತಿಷ್ಠಿತರನ್ನು, ದಲಿತ ಸಂಘರ್ಷಸಮಿತಿಯಂಥ ಸಮಿತಿಯ ಸದಸ್ಯರನ್ನು ಒಗ್ಗೂಡಿಸಿದ್ದರೆ ತತ್‌ಕ್ಷಣ ಚರ್ಚೆ ಮಾಡುವುದಕ್ಕೆ ಒಂದು ವೇದಿಕೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಸಲಹೆ ಕೊಟ್ಟೆ. ಅದನ್ನು ತಾವು ಪರಿಶೀಲನೆ ಮಾಡಿ ಮತ್ತೆ ರಕ್ಷಣೆ ಕೊಡುವುದಕ್ಕೆ ಕಾರ್ಯ ನಿರ್ವಾಹಕ ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಏನು ಬಿಡುತ್ತಿದ್ದಾರೆ ಇದೆಲ್ಲ ತಮಗೆ ಗೊತ್ತಿದೆ. ಆದರೆ ಇದು ಮೂಲತ: ಒಂದಂ ಸಾಮಾಜಿಕ ಪಿಡುಗು ಆಗಿರುವುದರಿಂದ ಇಂತಹ ಒಂದು ಸಲಹೆಯನ್ನು ಎಲ್ಲಾ ಮಟ್ಟದಲ್ಲೂ ಆಲೋಚನೆ ಮಾಡುವುದು ಒಂದಂ. ಎರಡನೆಯದು ಕೆಲವುಕಡೆ ತಮ್ಮ ರಕ್ಷಣೆಗಾಗಿ ದಲಿತರು ಗನ್ ಲೈಸನ್ಸ್‌ಗಳನ್ನು ಕೊಡಿ ಎಂದು ಹೇಳಿದ್ದಾರೆ. ಅಂತಹ ಆಲೋಚನೆ ಏನಾದರೂ ಸರ್ಕಾರಕ್ಕೆ ಇದೆಯೇ? ಹಾಗಿಲ್ಲದೇ ಇದ್ದರೆ ಅಗತ್ಯವೆಂದು ಕಂಡುಬಂದರೆ ಇಂತಹ ಲೈಸೆನ್ಸ್‌ಗಳನ್ನು ಕೊಡುವುದಕ್ಕೆ ಕೂಡ ನೀವು ಆಲೋಚನೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಗನ್‌ಲೈಸೆನ್ಸ್‌ಗೆ ಸಂಬಂಧಪಟ್ಟ ನಿಯಮಗಳಿವೆ, ನಿಬಂಧನೆಗಳಿವೆ. ಆ ನಿಯಮ ನಿಬಂಧನೆಗಳಿಗೆ ಬಂದಾಗ ಎಲ್ಲೆಲ್ಲಿ ಅವಶ್ಯಕತೆ ಇದೆ ತೊಂದರೆ ಇದ್ದರೆ ಅದನ್ನು ನಿವಾರಿಸಲಿಕ್ಕೆ ಇದೆ. ಆ ಪರಿಸ್ಥಿತಿ ಸಧ್ಯದಮಟ್ಟಿಗೆ ಕರ್ನಾಟಕ ರಾಜ್ಯದಮಟ್ಟಿಗೆ ಬಂದಿಲ್ಲ. ಅದಂ ಬರುವುದೂ ಬೇಡ. ಅದು ಬಾರದ ಹಾಗೆ ಪರಿಸರ ನಿರ್ಮಾಣ ಮಾಡಲಿಕ್ಕೆ ನಾವೆಲ್ಲರೂ ಕೂಡಿ ಪ್ರಯತ್ನ ಮಾಡೋಣ. ಆಮೇಲೆ ಎರಡನೆಯದಾಗಿ, ಕಂದಾಯ ಉಪವಿಭಾಗದ ಮಟ್ಟಿಗೆ, ಜಿಲ್ಲಾ ಮಟ್ಟಿಗೆ, ತಾಲ್ಲೂಕು ಮಟ್ಟಿಗೆ ಅಧಿಕಾರೇತರರ ಸಮಿತಿಗಳನ್ನು ಮಾಡಲಿಕ್ಕೆ ಅವಕಾಶ ಇದೆ. ಬಹುಪಾಲು ಆ ಜಿಲ್ಲಾಮಟ್ಟದಲ್ಲಿ, ಉಪವಿಭಾಗ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಕೆಲವು ಘಟನೆಗಳು ದೌರ್ಜನ್ಯಗಳು ಆಗಲಿ ನಡೆಯುತ್ತವೆ, ಅಲ್ಲಿ ಆಯಾಯ ಜಿಲ್ಲಾಮಟ್ಟದಲ್ಲಿ ಅಧಿಕಾರಿ ಮತ್ತು ಅಧಿಕಾರೇತರರು ಕೂಡಿ

ಕೊಂಡು ಶಾಂತಿ ಪಾಲನೆ ಮಾಡಲಿಕ್ಕೆ, ಸೌಹಾರ್ದ ವಾತಾವರಣ ಮೂಡುವ ಹಾಗೆ ಮಾಡಲಿಕ್ಕೆ ಅವಕಾಶ ಇದೆ. ಆದ್ದರಿಂದ ತಾವು ಗನ್‌ಲೈಸನ್ಸ್ ಬಗ್ಗೆ ಏನು ಹೇಳಿದ್ದೀರಿ, ಆಯಾಯಾ ಪರಿಸ್ಥಿತಿಗೆ ಹೊಂದಿಕೊಂಡು ಆಯಾಯ ಜಾಗದಲ್ಲಿ ಏನು ನಿಬಂಧನೆಗಳಿವೆ. ಅದರಂತೆ ಮಾಡಲಿಕ್ಕೆ ಆಯಾಯ ಅಧಿಕಾರಿಗಳಿಗೆ ಅಧಿಕಾರ ಇದೆ. ಬಹುಶ: ಈ ಪರಿಸ್ಥಿತಿ ನಿರ್ಮಾಣ ಆಗದೇ ಇರಲಿ ಎಂಬುದು ನಮ್ಮ ಕೋರಿಕೆ ಇರಬೇಕು. ಅಂತಹ ಪರಿಸ್ಥಿತಿ ಆಗದೇ ಇರುವಂಥ ರೀತಿಯಲ್ಲಿ ನಾವೆಲ್ಲ ನಮ್ಮ ನಮ್ಮ ವಲಯದಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಧಾನ ಮಂತ್ರಿಗಳು ತಮ್ಮ ಪರಿಹಾರ ನಿಧಿಯಿಂದ ಹಣ ಕೊಡುತ್ತೇವೆ ಎಂದೂ ಇಲ್ಲಿ ಬಂದಾಗ ಘೋಷಣೆ ಮಾಡಿದರು. ಇದು ಪತ್ರಿಕೆಯಲ್ಲಿ ಬಂದಿದೆ. ನಾನೇ ಪಕ್ಷದ ಅಧ್ಯಕ್ಷನಾಗಿ ಪ್ರಧಾನಮಂತ್ರಿಗಳನ್ನು ಪ್ರಾರ್ಥನೆ ಮಾಡಿದ್ದೆ. ನಾಲ್ಕು ಲಕ್ಷ ರೂಪಾಯಿಗಳನ್ನು ರಿಲೀಜ್ ಮಾಡುತ್ತೇನೆ ಎಂದು ಹೇಳಿದ್ದರು. ಅದು ಪತ್ರಿಕೆಯಲ್ಲಿ ಬಂದಿದೆ. ಸರ್ಕಾರಕ್ಕೆ ಈ ಬಗ್ಗೆ ಕಮ್ಯುನಿಕೇಷನ್ ಬಂದಿದೆಯಾ ? ಬಾರದೇ ಇದ್ದರೆ ತಕ್ಷಣ ಅವರಿಗೆ ಪತ್ರ ಬರೆದು ಈ ಪರಿಹಾರ ನಿಧಿಯಿಂದ ಪರಿಹಾರಧನವನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರ ನಾನೂ ಪತ್ರಿಕೆಯಲ್ಲಿ ಓದಿದ್ದೇನೆ, ಆದರೆ ನನಗೆ ಬಂದಂಥ ಕಡತದಲ್ಲಿ ಈ ವಿಚಾರ ಇಲ್ಲ. ಮತ್ತೆ ಇಲ್ಲಿಯ ಶನೇ ವಿಭಾಗದ ಉತ್ತರದಲ್ಲಿ, ''ಈ ವಿಚಾರವನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡುತ್ತಿದ್ದೇವೆ'' ಎಂದು ಹೇಳಿದ್ದೇನೆ. ಬಹುಶ: ತಾವು ಹೇಳಿದ ನಾಲ್ಕು ಲಕ್ಷ ರೂಪಾಯಿ ವಿಚಾರ ಏನಿದೆ, ಆದರ ಬಗ್ಗೆ ಕೂಡ ಕೇಂದ್ರದ ಜೊತೆಯಲ್ಲಿ ನಾವು ವ್ಯವಹರಿಸಿ ಅವರಿಗೆ ನೆನಪು ಮಾಡಿಕೊಟ್ಟು, ಅದನ್ನು ದೊರಕಿಸಿಕೊಳ್ಳಲಿಕ್ಕೆ ಎಲ್ಲ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಬಂದು ವಿಚಾರವನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ' ಅದು ಏನೆಂದರೆ. ಈ ದೌರ್ಜನ್ಯಗಳ ಬಗ್ಗೆ ಶ್ರೀ ಮೊಯಿಲಿಯವರು ಈ ಕಡೆ ಕುಳಿತಿದ್ದಾಗ ಏನು ಭಾಷಣ ಮಾಡಿದ್ದಾರೆ ಮತ್ತು ಅಲ್ಲಿ ಸರ್ಕಾರದಕಡೆಗೆ ಹೋಗಿ ಏನು ಮಾತನಾಡುತ್ತಿದ್ದಾರೆ. ಈ ಉತ್ತರ ಅವರಿಂದ ನಾನು ನಿರೀಕ್ಷೆ ಮಾಡಿರಲಿಲ್ಲ. ನನಗೆ ನಿಜವಾಗಿಯೂ ನೋವಾಗಿದೆ. ನಾನು ಇದರ ಬಗ್ಗೆ ವಿಶೇಷ ಕಾಳಜಿ ವಹಿಸಿಕೊಂಡಿದ್ದೆನೆ. ಎಲ್ಲೆಲ್ಲಿ ದೌರ್ಜನ್ಯಗಳು ನಡೆದಿವೆ ಅಲ್ಲಿಗೆ ನನ್ನ ಸ್ವಂತ ಖರ್ಚಿನಲ್ಲಿ ಕಳೆದ ಆರು ತಿಂಗಳಿಂದ ಹೋಗಿಬಂದಿದ್ದೇನೆ. ಬಹುಶ : ಅವರು ಹೋಗಿಬಂದಿದ್ದರೆ ಹೀಗೆ ಉತ್ತರ ಕೊಡುತ್ತಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಎರಡು ಪ್ರಶ್ನೆಗಳನ್ನು ಕೇಳುತ್ತೇನೆ.

ಮೊದಲನೆಯದು, ವಿಭಾಗದ ಮಟ್ಟದಲ್ಲಿ ವಿಶೇಷ ನ್ಯಾಯಾಲಯಗಳನ್ನು ಮಾಡುತ್ತೇವೆಂದು ಸರ್ಕಾರದಲ್ಲಿ ಕುಳಿತಿರತಕ್ಕಂಥ ಮಂತ್ರಿಗಳ ಮೂಲಕ ಮೂರು ವರ್ಷದಿಂದ ಉತ್ತರ ಬರುತ್ತಿದೆ. ಇದಕ್ಕೆ ದಯಮಾಡಿ ಕೊನೆ ಹಾಡಲೇಬೇಕು. ಆದಷ್ಟುಬೇಗ ವಿಶೇಷ ನ್ಯಾಯಾಲಯಗಳನ್ನು ಮಾಡುವುದಕ್ಕೆ ಏನು ತೊಂದರೆ ಇದೆ, ಏಕೆ ಮಾಡಬಾರದು ಎಂದು ಕೇಳಬಯಸುತ್ತೇನೆ. ಇದಕ್ಕೆ ಶೇಕಡ ೫೦ರಷ್ಟು ಹಣವನ್ನು ಕೇಂದ್ರ ಸರ್ಕಾರ ಭರಿಸಿಕೊಡುತ್ತದೆ. ನಿಮಗೆ ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ನನಗೆ ಅರ್ಥವಾಗುತ್ತಿಲ್ಲ. ತಾವು ಸಂಬಂಧಪಟ್ಟ ಮಂತ್ರಿಗಳಲ್ಲ. ಆದರೂ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ಎಂದು ಕೇಳುತ್ತೇನೆ. ಎರಡನೆಯದಾಗಿ, ತಾವು ಗನ್ ಲೈಸೆನ್ಸ್ ಬಗ್ಗೆ ಹೇಳಿದ್ದೀರಿ. ಇವತ್ತು ಹರಿಜನರ ಮೇಲೆ ದೌರ್ಜನ್ಯಗಳು ಆಗುತ್ತಿವೆ. ನೀವು ಮಂಡ್ಯಾದೆ ಕಾಡುಕೊತ್ತನಹಳ್ಳಿಗೆ ಹೋಗಿ ಬನ್ನಿ. ಮಾನ್ಯ ಅಧ್ಯಕ್ಷರೇ, ತಮ್ಮ ಜಿಲ್ಲೆ, ಇದು ತಮ್ಮ ಗಮನಕ್ಕೂ ಬಂದಿರಬಹುದು. ಇವತ್ತು ಅಲ್ಲಿರತಕ್ಕ ಹರಿಜನರು ಬಹಳ ಭಯಭೀತರಾಗಿದ್ದಾರೆ. ಅಲ್ಲಿರತಕ್ಕ ನೂರಾರು ಜನ ಯುವಕರು ನನ್ನನ್ನು ಭೇಟಿ ಮಾಡಿದ್ದಾರೆ, ನಮಗೆ ಗನ್ ಲೈಸೆನ್ಸ್ ಬೇಕೆಂದು ಕೇಳಿದ್ದಾರೆ. ಆ ಊರಿನಲ್ಲಿ ಬೇರೆಯವರ ಕೇರಿಗಳಿಗೆ ಇವರು ಹೋಗುವುದಕ್ಕಾಗುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ, ನನ್ನಂಥ ದೊಡ್ಡಪರು ಆಥವಾ ಎಸ್ಟೇಟ್ ಮಾಲೀಕರು ಅಥವಾ ಹಣಬಲ ಇರುವವರಿಗೆ ಕಾನೂನನ್ನು ಅಳವಡಿಸಿ ಗನ್ ಲೈಸೆನ್ಸ್ ಕೊಡುವಹಾಗೆ, ಇವರಿಗೂ ಅಳವಡಿಸುತ್ತೇವೆಂದು ಹೇಳಿದರೆ, ನಿಮಗೆ ಏನು ಕಳಕಳಿ ಇದೆಯೋ ಅರ್ಥವಾಗುವುದಿಲ್ಲ. ದಯಮಾಡಿ, ಇದನ್ನು ವಿಶೇಷವಾಗಿ ಪರಿಗಣಿಸಿ ಎಲ್ಲಿ ದೌರ್ಜನ್ಯ ನಡೆದಿದೆ, ಅಂತಹ ಕಡೆ ತಮ್ಮ ಅಧಿಕಾರಿಗಳು, ಪೋಲೀಸಿನವರು ಏನು ಕ್ರಮ ತೆಗೆದುಕೊಂಡಿದ್ದಾರೆ ಅವರ ಮೇಲೆ ರಾಜಕೀಯ ಒತ್ತಡಗಳು ಬರುತ್ತಾ ಇದೆ. ವಿಶೇಷವಾಗಿ ಮಂಡ್ಯ ಜಿಲ್ಲೆಯ ಕಾಡುಕೊತ್ತನಹಳ್ಳಿಯಲ್ಲಿರತಕ್ಕ ಹರಿಜನರು ಭಯಭೀತರಾಗಿದ್ದಾರೆ, ಅವರು ನಮಗೆ ಗನ್ ಲೈಸೆನ್ಸ್ ಬೇಕು ಎಂದು ಕೇಳಿದ್ದಾರೆ, ಆದ್ದರಿಂದ ಇದನ್ನು ವಿಶೇಷ-ಸಂದರ್ಭ ಎಂದು ಪರಿಗಣಿಸಿ, ಅವರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಅಧಿಕಾರಕ್ಕೆ ಬಂದಾಗ ವ್ಯಕ್ತಿಗಳ ಹೃದಯ ಒಂದುರೀತಿ ಮಿಡಿಯುವುದು, ಅಧಿಕಾರ ಇಲ್ಲದಿರುವಾಗ ಹೃದಯ ಒಂದುರೀತಿ ಮಿಡಿಯುವುದು, ಇದು ತಮಗೂ ಅನ್ವಯವಾಗುವುದಿಲ್ಲ, ನಮಗೂ ಅನ್ವಯವಾಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾವೇನು ಮಾತನಾಡಿದ್ದೀರಿ ಎಂದು ರೆಕಾರ್ಡ್‌ನಲ್ಲಿದೆ. ಕಳೆದ ಆರು ತಿಂಗಳಲ್ಲಿ ಹರಿಜನರ ಮೇಲೆ ೩೮೫ ದೌರ್ಜನ್ಯಗಳು ಆಗಿವೆ, ಒಂದೆರಡಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಹೃದಯ ಮಿಡಿಯುವ ಪ್ರಮಾಣವನ್ನು ರೆಕಾರ್ಡ್ ತರಿಸಿ ನೋಡಿದರೆ, ಬಹುಶಃ ತಮಗೂ ತೊಂದರೆಯಾಗಬಹುದು, ನಮಗೂ ತೊಂದರೆಯಾಗಬಹುದು ಆದ್ದರಿಂದ ಅದುಬೇಡ. ವಿಷಯಕ್ಕೆ ಸೀಮಿತವಾಗಿ, ೩೮೫ ಎಂದು ತಾವು ಹೇಳಿದ್ದೀರಿ. ರಾಜಕೀಯ ಮಾಡಬಾರದು ಎಂಬ ಉದ್ದೇಶದಿಂದ ಹಿಂದಿನ ಅಂಕಿಸಂಖ್ಯೆಯನ್ನು ನಾನು ಹೇಳುತ್ತಿಲ್ಲ. ನಾವು ಇವತ್ತು ಸರ್ಕಾರದಿಂದ ಪ್ರಾಮಾಣಿಕವಾಗಿ ಅಂಕಿಸಂಖ್ಯೆಯನ್ನು ಈ ಸದನಕ್ಕೆ ಒದಗಿಸಿದ್ದೇ ತಪ್ಪಾಗುವುದಿಲ್ಲ, ಅದು ನಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇಲ್ಲಿ ಕೊಟ್ಟ ಅಂಕಿಸಂಖ್ಯೆಗಳ ಕೆಲವು ಸಂದರ್ಭಗಳಲ್ಲಿ ತಪ್ಪು ಎಂದು ಏನು ಬೇಕಾದರೂ ಕೊಡತ್ಕಂಥಾದ್ದು ಎನ್ನುವುದು ನಿಮ್ಮ ಉತ್ತರವೇ ?

SRI M. VEERAPPA MOILY.—Sir, either I must have the opportunity to speak or the Hon. Member should speak.

MR. SPEAKER.—You will have the opportunity to reply.

SRI M. VEERAPPA MOILY.—Sir, when tne Hon. Member spoke, there was some political overtone in the questions asked by the Hon. Member. We must be in a position to take back also. ಆದ್ದರಿಂದ ಇವತ್ತು ಈ ಅಂಕಿಸಂಖ್ಯೆಗಳ ಘರ್ಷಣೆಗೆ, ಜಂಜಾಟಕ್ಕೆ, ಈ ಸುಳಿಗೆ ದಲಿತರ ಮೇಲೆ ಆಗತಕ್ಕ ದೌರ್ಜನ್ಯವನ್ನು ತಂದುಹಾಕುವುದು ಬೇಡ. ಮತ್ತೆ ಗನ್ ಲೈಸೆನ್ಸ್ ಬಗ್ಗೆ ನಾನು ಹೇಳಿದಂಥ ಉತ್ತರವನ್ನು ಮಾನ್ಯ ಸದಸ್ಯರು ಸಂಪೂರ್ಣವಾಗಿ ಸ್ವೀಕಾರ ಮಾಡಲಿಲ್ಲವೆಂದು ಅನಿಸುತ್ತದೆ. ನಾನು ಹೇಳಿದೆ, ಎಲ್ಲೆಲ್ಲಿ ಗನ್‌ಲೈಸೆನ್ಸ್‌ಗೆ ಸಂಬಂಧಪಟ್ಟ ನಿಬಂಧನೆಗಳು ಇವೆ. ಒಂದುವೇಳೆ ಸೀಮಿತವಾಗಿ, ನಡೆದಿವೆ, ಎಲ್ಲಿ ದೌರ್ಜನ್ಯ ಹೆಚ್ಚು ನಡೆದಿದೆ' ಅಲ್ಲಿ ಅವರಿಗೆ ರಕ್ಷಣೆ ಬೇಕು. ಸ್ವಯಂ ತಮ್ಮನ್ನು ರಕ್ಷಣೆ ಮಾಡತಕ್ಕ ಶಕ್ತಿ ಹೆಚ್ಚು ಕೊಡಬೇಕೆಂಬ ಚೌಕಟ್ಟಿನಲ್ಲಿ ಅಲ್ಲಲ್ಲಿ ಜಿಲ್ಲಾಧಿಕಾರಿಗಳು ಸಡಿಲಗೊಳಿಸೇ ಗೊಳಿಸುತ್ತಾರೆ. they will be definitely will be more liberal in issuing gun licences under the rules exist now. ಅದಕ್ಕೆ ರಾಜ್ಯಮಟ್ಟದ ಇಂತಹ ಸೀಮಿತವಾದ ವರ್ಗಕ್ಕೆ, ಸೀಮಿತವಾದ ಪ್ರಶ್ನೆಗಳಿಗೆ ಗನ್ ಲೈಸೆನ್ಸ್‌ಗೆ ವಿಶೇಷವಾದ ಕಾಯಿದೆಯ ಅಗತ್ಯ ಇಲ್ಲ. ಇದ್ದಂಥ ಕಾಯಿದೆಯ ಕಕ್ಷೆಯಲ್ಲಿಯೇ ಇದನ್ನು ಪರಿಹರಿಸುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಹೇಳಿದ್ದೇನೆಯೇ ಹೊರತು, ಇವರಿಗೆ ಗನ್ ಲೈಸೆನ್ಸ್ ಕೊಡಬಾರದು, ಕೊಟ್ಟರೆ ಏನೋ ಆಗುತ್ತದೆ ಎಂಬ ಭಾವನೆ ಖಂಡಿತವಾಗಿ ಇಲ್ಲ. ಎರಡನೆಯದಾಗಿ ಹರಿಜನರ ಬಗ್ಗೆ ತಮ್ಮ ಕಳಕಳಿ ಪೂರ್ತಿಯಾಗಿ ಅರ್ಥವಾಗುತ್ತದೆ, ನಿಮ್ಮ ಪ್ರಾಮಾಣಿಕತೆಯ ಬಗ್ಗೆ ನಾನು ಪ್ರಶ್ನೆ ಹಾಕುತ್ತಾ ಇಲ್ಲ. ವೈಯಕ್ತಿಕವಾಗಿ, ಸಿಂಧ್ಯರವರಿಗೆ ತಮ್ಮ ಪಕ್ಷದ ಬಗ್ಗೆ ಹೇಳುವುದಿಲ್ಲ, ವೈಯಕ್ತಿಕವಾಗಿ ತಮಗೆ ನೂರಕ್ಕೆ ನೂರರಷ್ಟು ಕಳಕಳಿ ಹರಿಜನರಮೇಲೆ ದಲಿತರ ಮೇಲೆ ಖಂಡಿತಾ ಇದೆ. ಆ ಕಳಕಳಿಯಿಂದಲೆ ತಾವು ಕೇಳಿದ್ದೀರಿ. ನಾಲ್ಕು ವರ್ಷದಿಂದ ವಿಶೇಷ ನ್ಯಾಯಾಲಯಗಳನ್ನು ಮಾಡುತ್ತೆವೆಂದು ಸರಕಾರ ಹೇಳಿಕೊಂಡು ಬಂದಿದೆ ಎಂದು ಹೇಳಿದ್ದೀರಿ. ನನಗೆ ಗೊತ್ತಿದ್ದಮಟ್ಟಿಗೆ, ೩೦-೧೧-೧೯೮೦ರಲ್ಲಿ, ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರಿಗೆ ಸಂಬಂಧಪಟ್ಟಂತೆ ದೌರ್ಜನ್ಯ ನಿವಾರಣೆ ಮಾಡಬೇಕೆಂದು ರಿಪೋರ್ಟನ್ನೇ ಇಸವಿಯ ಕೇಂದ್ರ ಶಾಸನ ಏನು ಜಾರಿಗೆ ಬಂತು, ಆ ಶಾಸನದ ಪ್ರಕಾರ ನಿರ್ದಿಷ್ಟವಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳಿಗೆ ಇಂತಹ ದೌರ್ಜನ್ಯಕ್ಕೆ ಸಂಬಂಧಪಟ್ಟ ಕೇಸ್‌ಗಳನ್ನು ವಿಚಾರಣೆ ಮಾಡತಕ್ಕ ಹಕ್ಕನ್ನು ಕೊಡಬೇಕೆಂದು ನಿರ್ದಿಷ್ಟಗೊಳಿಸಲಾಗಿದೆ. Each State must be talking about it. Now, it has been crystalised into a form of law. ಇದು ಇವತ್ತು ಬಂದಿದೆ. ಅದು ಬಂದಿದ್ದರಿಂದ We have gone a step forward designating the particular District Judge or Sessions Judge to look into the matter. As far as our Government is concerned, we are going a step forward and say that we are thinking of constituting four District Courts

exclusively to deal with this matter. ಇದು ಹಿಂದಿನಿಂದ ಬಂದಂಥ ಪ್ರಪೋಸಲ್ ಅಲ್ಲ. It is in consonance with the Act which has come into force from 30-1-1990.

ಆದ್ದರಿಂದ ಇದಕ್ಕೆ ಹಿಂದಿನ ಇತಿಹಾಸ ನನ್ನ ಹತ್ತಿರ ಇಲ್ಲ, ನಾನು ಹುಡುಕುವುದಕ್ಕೂ ಹೋಗುವುದಿಲ್ಲ. ಇದೆಲ್ಲಾ ಪ್ರಗತಿಪರವಾದ ಕಾನೂನನ್ನು ಹಿಂದೆ ಇದ್ದ ಕೇಂದ್ರ ಸರಕಾರ ತಂದಿದೆ. ಅದನ್ನು ಅನುಷ್ಠಾನ ಮಾಡುವುದಕ್ಕೆ ಏನು ಕಾರ್ಯಕ್ರಮ ಬೇಕು ಅದನ್ನು ಈಗ ತೆಗೆದುಕೊಳ್ಳುತ್ತಾ ಇದ್ದೇವೆ.

ಅಧ್ಯಕ್ಷರು.— ನೆಕ್ಸ್ಟ ಕೊಶ್ಚನ್ ಭೈರೇಗೌಡ. ಆರ್. ಎನ್. ನಾಯಕ್.

ಶ್ರೀ ವಾಟಾಳ್ ನಾಗರಾಜ್.— ಇದರ ಬಗ್ಗೆ ಅರ್ಧ ಘಂಟೆ ಚರ್ಚೆಗೆ ಅವಕಾಶ ಕೊಡಿರಿ.

ಅಧ್ಯಕ್ಷರು.— ಬರೆದು ಕಳುಹಿಸಿ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಅಧ್ಯಕ್ಷರೇ, I have to seek your protection.

MR. SPEAKER.—The Hon. Leader of the opposition seeks my protection. I will give him the protection.

ಶ್ರೀ ಡಿ.ಬಿ. ಚಂದ್ರೇಗೌಡ.— ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ ಏನು ಹೇಳಿದ್ದಾರೆ, ಎಂದರೆ, ಮಾನ್ಯ ಸಿದ್ಧಾರೂಢರ ಕಳಕಳಿ ನನಗೆ ಗೊತ್ತು, ನಿಮ್ಮ ಪಕ್ಷದವರದ್ದು ಹೇಗೋ ಎಂದೆಂ ಹೇಳಿದರು. ಹೀಗೆ ಅವರು ಪಕ್ಷಗಳನ್ನು ಶಾಸನ ಸಭೆಗೆ ತಂದು. ನಮ್ಮ ಪಕ್ಷಕ್ಕೆ ಕಳಕಳಿ ಇಲ್ಲ ಎಂದು ಅರ್ಥ ಬರುವ ಹಾಗೆ ಏನು ಹೇಳಿದ್ದಾರೆ ಅದನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು. This is not the way, the Hon. minister is expected to reply. ಅದನ್ನು ಇಲ್ಲಿ ಏತಕ್ಕೆ ತರಂತ್ತಿದ್ದಾರೆ. ಪಕ್ಷಕ್ಕೆ ಕಳಕಳಿ ಇಲ್ಲ ಎನ್ನುವ ಅರ್ಥದಲ್ಲಿ ಏತಕ್ಕೆ ಹೇಳುತ್ತಿದ್ದಾರೆ. ಅದೂ ಶಾಸನಸಭೆಯ ರೆಕಾರ್ಡ್ಸ್‌ಗೆ ಹೋಗಬಾರದು. ಅದನ್ನು ಕಡತದಿಂದ ತೆಗೆದು ಹಾಕಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚಂದ್ರೇಗೌಡರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರಿಸಿದರು. ಇದೇ ಪ್ರಶ್ನೆಯನ್ನು ನಾನು ಮೂರು ದಿವಸದ ಹಿಂದೆ ಇದೇ ಸದನದಲ್ಲಿ ಹಾಕಿದ್ದೆ. ಆಗ ಟೈಮ್ ಕೇಳಿದರು. ಇದೇ ಪ್ರಶ್ನೆ ನಾನು ಹಾಕಿದ್ದೆ. ಕಳೆದ ಆರು ತಿಂಗಳಲ್ಲಿ ಎಸ್.ಸಿ.ಎಸ್.ಟಿ. ಮೇಲೆ ಏನು ಅಟ್ರಾಸಿಟೀಸ್ ಆಗಿದೆ, ಎಷ್ಟಾಗಿದೆ, ಅದಕ್ಕೆ ಏನು ಪರಿಹಾರ ಕೊಟ್ಟಿದ್ದೀರಿ ಎಂದು ನಾನೂ ಕೇಳಿದ್ದೆ. ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ, ಮೂರು ದಿವಸ ಟೈಮ್ ತೆಗೆದುಕೊಂಡರು. ಆದರೆ ಈ ಪ್ರಶ್ನೆ ಇವತ್ತು ಬಂದ ತಕ್ಷಣ ಸಡನ್ ಆಗಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ, ಇದಕ್ಕೂ ನಾನು ಹಾಕಿದ ಪ್ರಶ್ನೆಗೂ ಏನೂ ವ್ಯತ್ಯಾಸ ಇಲ್ಲ. ನಮ್ಮ ಪ್ರಶ್ನೆಗೆ ಉತ್ತರ ಕೊಡಬಾರದೆಂದು ಏನಾದರೂ ಇದೆಯೋ? ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಈ ಪ್ರಶ್ನೆಗೆ ಉತ್ತರ ಈಗ ಅರ್ಧ ಘಂಟೆ ಕೆಳಗೆ ಬಂತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಏನು ಎಂದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಈಗ ಸುಮಾರು ೪೦ ನಿಮಿಷಗಳ ಕೆಳಗೆ ನಮ್ಮ ಕಾರ್ಯಾಲಯಕ್ಕೆ ಈ ಪ್ರಶ್ನೆಗೆ ಉತ್ತರ ಬಂತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇರಬಹುದು, ಇದ್ದರೆ ಜಂಟಿಯಾಗಿ ಹಾಕಬಹುದಾಗಿತ್ತು. ಇಲ್ಲದಿದ್ದರೆ ಇದನ್ನೂ ಕೂಡಾ ನನ್ನ ಪ್ರಶ್ನೆಯ ಜೊತೆಯಲ್ಲೇ ತೆಗೆದುಕೊಳ್ಳಬಹುದಾಗಿತ್ತು. ನನ್ನ ಪ್ರಶ್ನೆ ಬಂದಿದ್ದನ್ನು, ಇದೇ ಸದನದಲ್ಲಿ ಮಾನ್ಯ ಮಂತ್ರಿಗಳು ಟೈಮ್ ಕೇಳಿ ಪೋಸ್ಟ್‌ಪೋನ್ ಮಾಡಿಸಿದರು ಇವತ್ತು ಪುನಃ ಇದೇ ಸಿಮಿಲರ್ ಆಗಿರತಕ್ಕಂಥ ಕೊಶ್ಚನ್ ಹಾಕಿದಕ್ಕೆ ಉತ್ತರ ತರಿಸಿಕೊಟ್ಟಿದ್ದಾರೆ. ನಾವು ಕೇಳಿದ್ದೂ ಇಲ್ಲ ಎಂದರೆ ನಮ್ಮ ರೈಟ್ಸ್‌ನ್ನು ಕರ್ಟೈಲ್ ಮಾಡಿದಹಾಗೆ ಆಗುತ್ತದೆ. ಇಷ್ಟೂಮಾತ್ರ ನಾನು ಹೇಳಬಹುದು.

ಪ್ರಶ್ನೆ ಸಂಖ್ಯೆ ೨೯೨ (೭೫೯)
೨೯೩ (೯೯೬) } ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

೧೦-೦೦.ಎ.ಎಂ

ಶ್ರೀ ಪೆರಿಲ್ ಎಂ. ಪುಲ್ಲಪ್ಪ.—ಮಾನ್ಯ ಅಧ್ಯಕ್ಷರೆ. ನಾನು ಟಿಜಿಟನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಕೆ.ಜೆ.ಜಾರ್ಜ್.—ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಉತ್ತರ ಕೊಡುವ ದಿವಸ ಅಲ್ಲ. ನಿನ್ನೆ ಗುರುವಾರ ಇತ್ತು. ಇವತ್ತು ನಾನು ಉತ್ತರ ಕೊಡುವ ದಿವಸ ಅಲ್ಲ. ತಪ್ಪಾಗಿ ಪ್ರಿಂಟ್ ಆಗಿದೆ.

ಅಧ್ಯಕ್ಷರು.—ನೋಡೋಣ.

ಗ್ರಾಮಾಂತರ ವಿದ್ಯುತ್ ಸರಬರಾಜು ಯೋಜನೆ ಬಗ್ಗೆ

೮೬೩. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ರಾಮಾಂತರ ವಿದ್ಯುತ್ ಸರಬರಾಜು ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ. (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಇದಕ್ಕೆ ಕಳೆದ ಮೂರು ವರ್ಷಗಳಿಂದ ಎಷ್ಟು ಹಣವನ್ನು ವೆಚ್ಚಮಾಡಲಾಗಿದೆ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ೯೭೫ ಕಂದಾಯ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.—

ಕ್ರಮ ಸಂಖ್ಯೆ	ತಾಲ್ಲೂಕು ವಿವರ	ದಿನಾಂಕ ೩೧-೩-೯೯ ರಲ್ಲಿರುವಂತೆ ವಿದ್ಯುದ್ದೀಕರಣಗೊಂಡ ಕಂದಾಯ ಗ್ರಾಮಗಳ ಸಂಖ್ಯೆ.
೧	ಚಿಕ್ಕಮಗಳೂರು	೨೦೯
೨	ಕಡೂರು	೨೪೫
೩	ಕೊಪ್ಪ	೮೦
೪	ಮೂಡಿಗೆರೆ	೧೩೯
೫	ನರಸಿಂಹರಾಜಪುರ	೫೭
೬	ಶೃಂಗೇರಿ	೪೭
೭	ತರೀಕೆರೆ	೨೦೧
	ಒಟ್ಟು ಸಂಖ್ಯೆ	೯೭೫

ಆ) ಕಳೆದ ಮೂರು ವರ್ಷಗಳಿಂದ ವಿದ್ಯುದ್ದೀಕರಣದ ಬಗ್ಗೆ ಮಾಡಿದ ವೆಚ್ಚಗಳ ವಿವರ ಕೆಳಕಂಡಂತಿದೆ.

ವರ್ಷ	ವೆಚ್ಚ ರೂ.ಗಳಲ್ಲಿ
೧೯೮೭-೮೮	೩೫,೯೯,೬೭೬-೦೦
೧೯೮೮-೮೯	೨.೮೫,೪೧೯-೦೦
೧೯೮೯-೯೦	ವೆಚ್ಚ ಮಾಡಿಲ್ಲ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಲ್ಲಿ ೧೯೮೭-೮೮ರಲ್ಲಿ ೩೫ ಲಕ್ಷ ೯೯ ಸಾವಿರ ೬೭೬ ರೂಪಾಯಿಗಳನ್ನು ಈ ಗ್ರಾಮಾಂತರ ವಿದ್ಯುದೀಕರಣಕ್ಕೆ ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ೧೯೮೮-೮೯ರಲ್ಲಿ ೨ ಲಕ್ಷ ೮೫ ಸಾವಿರ ೪೧೯ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅಂದರೆ ೩೫ ಲಕ್ಷ ರೂಪಾಯಿಗಳು ಇದ್ದದ್ದು ೨ ಲಕ್ಷ ರೂಪಾಯಿಗಳಿಗೆ ದಿಢೀರನೆ ಇಳಿಸಿದ್ದೀರಿ, ಅದೂ ಒಂದೇ ವರ್ಷದಲ್ಲಿ ಹೀಗಿರಬೇಕಾದರೆ ಮೊದಲನೇ ವರ್ಷದಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲಾಯಿತು, ೧೯೮೮-೮೯ನೇ ಸಾಲಿನಲ್ಲಿ ಸಮ್ಮ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲಾಯಿತು ಎನ್ನುವುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಹೇಳಬೇಕು ?